# Frequently Asked Questions
## ಸಂಭವನೀಯ ಪ್ರಶ್ನೆಗಳು ಮತ್ತು ಉತ್ತರಗಳು
## NMMS Online Application – Related

**ವಿಶೇಷ ಸೂಚನೆ:– NMMS ಪರೀಕ್ಷೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಗಾಗಿ ಕೆ.ಎಸ್.ಇ.ಇ.ಬಿ ವೆಬ್‌ಸೈಟ್‌ನಲ್ಲಿರುವ ಸುತ್ತೋಲೆಯನ್ನು ಗಮನಿಸುವುದು.**

1. **ಪ್ರಶ್ನೆ:**-NMMS ಪರೀಕ್ಷೆಯನ್ನು ಯಾವ ತರಗತಿಗೆ ನಡೆಸಲಾಗುವುದು ?

   **ಉತ್ತರ:**– 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಸ್ಥಳೀಯ ಸಂಸ್ಥೆಗಳ ಶಾಲೆಗಳ ವಿದ್ಯಾರ್ಥಿಗಳಿಗೆ ನಡೆಸಲಾಗುವುದು.

2. **ಪ್ರಶ್ನೆ:**-NMMS ಪರೀಕ್ಷೆಯಲ್ಲಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಅಂದರೆ 7ನೇ ತರಗತಿಯಲ್ಲಿ ಎಷ್ಟು ಅಂಕಗಳನ್ನು ಗಳಿಸಿರಬೇಕು?

   **ಉತ್ತರ:**– ಹಿಂದಿನ ತರಗತಿಯಲ್ಲಿ ಅಂದರೆ 7ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಶೇ.55 ಅಂಕಗಳನ್ನು ಅಥವಾ ಗ್ರೇಡ್‌ಅನ್ನು ಪಡೆದಿರಬೇಕು. ಪ.ಜಾ ಮತ್ತು ಪ.ಪಂ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಅಂಕಗಳಲ್ಲಿ ಶೇ.5 ರಷ್ಟು ವಿನಾಯಿತಿ ಇರುತ್ತದೆ.

3. **ಪ್ರಶ್ನೆ:**-NMMS ಪರೀಕ್ಷೆಯಲ್ಲಿ ಅರ್ಜಿಸಲ್ಲಿಸುವ ವಿದ್ಯಾರ್ಥಿಗಳ ಪೋಷಕರ ಆದಾಯದ ಮಿತಿ ಎಷ್ಟಿರಬೇಕು?

   **ಉತ್ತರ:**– ಪೋಷಕರ ವಾರ್ಷಿಕ ಆದಾಯದ ಮಿತಿ ರೂ. 1.50 ಲಕ್ಷಗಳನ್ನು ಮೀರಿರಬಾರದು.

4. **ಪ್ರಶ್ನೆ:**-ಅರ್ಜಿಗಳು ಎಲ್ಲಿ ದೊರೆಯುತ್ತವೆ? ಯಾರು ಭರ್ತಿ ಮಾಡಬೇಕು?

   **ಉತ್ತರ:**– ಅರ್ಜಿಗಳು http://kseeb.kar.nic.in **ವೆಬ್‌ಸೈಟ್**‌ನಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವಂತಿಲ್ಲ, ಶಾಲಾ ಮುಖ್ಯ ಶಿಕ್ಷಕರ ಮೂಲಕವೇ ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

5. **ಪ್ರಶ್ನೆ:**- NMMS ಪರೀಕ್ಷೆಗೆ ಯಾವ ವೆಬ್‌ಸೈಟ್‌ನಲ್ಲಿ ಅರ್ಜಿ ಲಭ್ಯವಿದೆ?

   **ಉತ್ತರ:**– http://kseeb.kar.nic.in **ವೆಬ್‌ಸೈಟ್**‌ನಲ್ಲಿ ಅರ್ಜಿ ಲಭ್ಯವಿದೆ.

6. **ಪ್ರಶ್ನೆ:**- ಮುಖ್ಯಶಿಕ್ಷಕರು ಅರ್ಜಿ ಸಲ್ಲಿಸುವ ವಿಧಾನ ಹೇಗೆ?

   **ಉತ್ತರ:**–ಈ ಭಾರಿ ಅರ್ಜಿಸಲ್ಲಿಸಲು ಶಾಲಾ ಮುಖ್ಯ ಶಿಕ್ಷಕರಿಗೆ ಅವಕಾಶ ನೀಡಲಾಗಿದ್ದು, ಈ ಕೆಳಕಂಡ ವಿಧಾನದಲ್ಲಿ ಅರ್ಜಿ ಸಲ್ಲಿಸಬಹುದು.

| ಕ್ರ.ಸಂ | ಶಾಲೆಗಳು | ಲಾಗಿನ್ ಆಗುವ ವಿಧಾನ |
|---|---|---|
| 1. | ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಪ್ರೌಢಶಾಲೆಗಳು, ಆದರ್ಶ, ಮೊರಾರ್ಜಿ ಹಾಗೂ ಸ್ಥಳೀಯ ಸಂಸ್ಥೆಗಳ ಶಾಲಾ ಮುಖ್ಯ ಶಿಕ್ಷಕರು. | ಈಗಾಗಲೇ ತಮ್ಮ ಶಾಲೆಗೆ KSEEB ಮಂಡಳಿಯಿಂದ ನೀಡಲಾದ ಶಾಲಾ ಸಂಕೇತದ ಮೂಲಕ Login ಆಗುವುದು. |
| 2. | ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು. | ತಮ್ಮ ಶಾಲೆಯ UDISE ಮೂಲಕ Login ಆಗಿ ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು. ಆಗ ಸದರಿ ಮೊಬೈಲ್ ಸಂಖ್ಯೆಗೆ ಬರುವ OTPಯನ್ನು ನಮೂದಿಸುವುದರ ಮೂಲಕ NMMS ಪರೀಕ್ಷೆಗೆ ಅರ್ಜಿ ಸಲ್ಲಿಸಲು Login ಆಗುವುದು. ಈ ಸಂದರ್ಭದಲ್ಲಿ UDISE ಸಂಖ್ಯೆಯನ್ನು User Name ಮತ್ತು Password ಆಗಿ ಬಳಸುವುದು ನಂತರದಲ್ಲಿ Password ಬದಲಾಯಿಸಿಕೊಂಡು Login ಆಗುವುದು. |

7. **ಪ್ರಶ್ನೆ:**–UDISE ಮೂಲಕ Login ಆಗುವಾಗ ಶಾಲೆಯವರು ಯಾವ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು?

**ಉತ್ತರ:**– ಉನ್ನತ್ತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯಶಿಕ್ಷಕರು UDISE ಮೂಲಕ Login ಆಗುವಾಗ ಶಾಲೆಯ ಮುಖ್ಯಶಿಕ್ಷಕರು/ಪ್ರಾಂಶುಪಾಲರ ಮೊಬೈಲ್ ಸಂಖ್ಯೆಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಪ್ರಥಮ ಬಾರಿಗೆ ನಮೂದಿಸಲಾಗುವ ಮೊಬೈಲ್ ಸಂಖ್ಯೆಗೆ OTP ಯನ್ನು ನೀಡಲಾಗುವುದು. ಈ ನಂಬರ್ Register ಆಗಿರುತ್ತದೆ.

8. **ಪ್ರಶ್ನೆ:**–UDISE ಬಳಸಿ ಬೇರೆಯಾರಾದರು Register ಆಗಿದ್ದರೆ ಏನು ಮಾಡಬೇಕು?

**ಉತ್ತರ:**–UDISE ಬಳಸಿ ಮುಖ್ಯ ಶಿಕ್ಷಕರೇ Register ಆಗಿ Login ಆಗಬೇಕು, ಒಂದು ವೇಳೆ ಮುಖ್ಯಶಿಕ್ಷಕರು ಲಾಗಿನ್ ಆಗಲು ಪ್ರಯತ್ನಪಟ್ಟಾಗ Already Registered ಎಂಬುದಾಗಿ ತೋರಿಸುತ್ತಿದ್ದರೆ, ತಾವು ತಕ್ಷಣ ತಂತ್ರಾಂಶದಲ್ಲಿ ನಮೂದಾಗಿರುವ ಸಹಾಯವಾಣಿಗೆ ಕರೆ ಮಾಡಿ ತಿಳಿಸಬೇಕು. ನಂತರ ಸಂಬಂಧಿಸಿದ ಅಧಿಕಾರಿಗಳು ಈಗಾಗಲೇ Register ಆಗಿರುವ ಮೊಬೈಲ್ ಸಂಖ್ಯೆಯ ವಿವರವನ್ನು ನೀಡುತ್ತಾರೆ, ಈ ಮೊಬೈಲ್ ಸಂಖ್ಯೆಯನ್ನು ಬದಲಾಯಿಸಬೇಕಾದರೆ ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಬದಲಾಯಿಸುವಂತೆ ತಿಳಿಸಿದಲ್ಲಿ ಬದಲಾವಣೆ ಮಾಡಿ Login ಆಗುವುದಕ್ಕೆ ಅವಕಾಶ ಮಾಡಿಕೊಡಲಾಗುವುದು. (ಮುಖ್ಯಶಿಕ್ಷಕರೇ ಕಡ್ಡಾಯವಾಗಿ ಅರ್ಜಿ ಸಲ್ಲಿಸಬೇಕಾಗಿದ್ದು, ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ).

9. **ಪ್ರಶ್ನೆ:**–Login ಆದ ಮೇಲೆ ಹೇಗೆ ಅರ್ಜಿ ಭರ್ತಿ ಮಾಡಬೇಕು?

**ಉತ್ತರ:**–Login ಆದ ಮೇಲೆ ವಿದ್ಯಾರ್ಥಿಯ ಎಸ್.ಎ.ಟಿ.ಎಸ್. ಸಂಕೇತವನ್ನು ಬಳಸುವ ಮೂಲಕ ಅರ್ಜಿಯನ್ನು ಭರ್ತಿ ಮಾಡಬಹುದು. ಒಂದು ವೇಳೆ ತಪ್ಪು ಸಂಖ್ಯೆ ಅಂದರೆ ವಿದ್ಯಾರ್ಥಿಯು 8ನೇ ತರಗತಿಯಲ್ಲಿ ಓದುತ್ತಿಲ್ಲದೇ ಬೇರೆ ಯಾವುದೇ ತರಗತಿಯಲ್ಲಿ ಓದುತ್ತಿದ್ದರೆ ಅಂತವರ ಮಾಹಿತಿಯನ್ನು ಪಡೆಯಲು ಸಾಧ್ಯವಿರುವುದಿಲ್ಲ ಹಾಗೂ ಪ್ರತಿ ಶಾಲೆಯವರು ತಮ್ಮ ಶಾಲೆಗೆ ಸಂಬಂಧಿಸಿದ ವಿದ್ಯಾರ್ಥಿಗಳ ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿದ್ದು. ಬೇರೆ ಶಾಲೆಯ ವಿದ್ಯಾರ್ಥಿಗಳ ಅರ್ಜಿಯನ್ನು ಭರ್ತಿ ಮಾಡಲು ಸಾಧ್ಯವಿರುವುದಿಲ್ಲ.

10. **ಪ್ರಶ್ನೆ:**–Login ಆದ ಮೇಲೆ ಅದೇ ಶಾಲೆಯ 8ನೇ ತರಗತಿಯಲ್ಲಿಯೇ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯಾಗಿದ್ದರೂ ಎಸ್.ಎ.ಟಿ.ಎಸ್ ಸಂಕೇತವಿಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಯ ಅರ್ಜಿಯನ್ನು ಹೇಗೆ ಸಲ್ಲಿಸಬೇಕು?

**ಉತ್ತರ:**–ಪ್ರತಿ ವಿದ್ಯಾರ್ಥಿಗೂ ಎಸ್.ಎ.ಟಿ.ಎಸ್ ಸಂಕೇತ ಕಡ್ಡಾಯವಾಗಿರುತ್ತದೆ. ಒಂದು ವೇಳೆ ಎಸ್.ಎ.ಟಿ.ಎಸ್ ನಲ್ಲಿ Register ಆಗಿರದಿದ್ದಲ್ಲಿ, ಮೊದಲು ಎಸ್.ಎ.ಟಿ.ಎಸ್ ನಲ್ಲಿ ನೋಂದಾಯಿಸಿಕೊಂಡು ನಂತರ ಎಸ್.ಎ.ಟಿ.ಎಸ್ ಸಂಖ್ಯೆ ಬಳಸಿ ಅರ್ಜಿ ಸಲ್ಲಿಸಬೇಕು.

11. **ಪ್ರಶ್ನೆ:**–Login ಆದ ಮೇಲೆ ವಿದ್ಯಾರ್ಥಿಯ ಮಾಹಿತಿಗಳು Screen ಮೇಲೆ ನಮೂದಾಗಿದ್ದು ಅವುಗಳಲ್ಲಿ ಕೆಲವು ಮಾಹಿತಿಗಳು ತಪ್ಪಾಗಿವೆ ಎಂದಾದರೆ ಅಂತಹ ಅಂಶಗಳನ್ನು ಹೇಗೆ ತಿದ್ದುಪಡಿ ಮಾಡಬೇಕು?

**ಉತ್ತರ:**–Screen ಮೇಲೆ ಕಾಣುತ್ತಿರುವ ಮಾಹಿತಿಗಳು ಎಸ್.ಎ.ಟಿ.ಎಸ್ ತಂತ್ರಾಂಶದಿಂದ ನೇರವಾಗಿ ನಮೂದಾಗಿರುವ ಮಾಹಿತಿಗಳು. ಈ ಮಾಹಿತಿಗಳನ್ನು ಈ ಅರ್ಜಿ ಸಲ್ಲಿಸುವಾಗ ಬದಲಾಯಿಸಲು ಸಾಧ್ಯವಿಲ್ಲ. ಒಂದು ವೇಳೆ ಬದಲಾವಣೆ ಮಾಡಬೇಕಾದರೆ ಮೊದಲು ಎಸ್.ಎ.ಟಿ.ಎಸ್ ಮಾಹಿತಿಯಲ್ಲಿ ಸರಿಪಡಿಸಬೇಕು. ಆ ನಂತರ ಅಂದರೆ 24 ಗಂಟೆಗಳ ಬಳಿಕ ತಾವು ಬದಲಾಯಿಸಿರುವ ಮಾಹಿತಿಗಳು Screen ಮೇಲೆ ಕಂಡುಬರುತ್ತವೆ. ಅದಾದ ನಂತರ ಅರ್ಜಿ ಸಲ್ಲಿಸುವುದು ಸೂಕ್ತವಾಗಿದೆ.

12. **ಪ್ರಶ್ನೆ:**–ನ್ಯೂನ್ಯತೆ (Disable) ಆಧಾರದ ಮೇಲೆ ಅರ್ಜಿ ಸಲ್ಲಿಸುವಂತಹ ವಿದ್ಯಾರ್ಥಿಗಳ ದಾಖಲೆಗಳನ್ನು ಒದಗಿಸಬೇಕೆ?

**ಉತ್ತರ:**–ಹೌದು, ನಮೂದಿಸಲಾಗಿರುವ ನ್ಯೂನ್ಯತೆಗೆ ಸಂಬಂಧಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಮುಖ್ಯ ಶಿಕ್ಷಕರು ವಿದ್ಯಾರ್ಥಿಗಳ ಮೂಲಕ ಪಡೆಯಬೇಕು (ಸಕ್ಷಮ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ಪಡೆಯಬೇಕು). ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ದಾಖಲೆಗಳ ಪ್ರತಿಗಳನ್ನು ತಮ್ಮ ಹಂತದಲ್ಲಿ ಕಾಯ್ದಿರಿಸುವುದು ಕಡ್ಡಾಯವಾಗಿದೆ.

13. **ಪ್ರಶ್ನೆ:**–ಮೀಸಲಾತಿ ಆಧಾರದ ಮೇಲೆ ಅರ್ಜಿ ನಮೂದಿಸುವಂತಹ ವಿದ್ಯಾರ್ಥಿಗಳ ದಾಖಲೆಗಳನ್ನು ಒದಗಿಸಬೇಕೆ?

**ಉತ್ತರ:**–ಹೌದು, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಇತರೆ ಹಿಂದುಳಿದವರ್ಗದ (ಒ.ಬಿ.ಸಿ) ಅಡಿಯಲ್ಲಿ ಮೀಸಲಾತಿ ಬಯಸುವವರು ಸಂಬಂಧಿಸಿದ ದಾಖಲೆಗಳನ್ನು ನೀಡುವುದು ಕಡ್ಡಾಯ (ಸದರಿ ದಾಖಲೆಗಳನ್ನು ಮುಖ್ಯ ಶಿಕ್ಷಕರು ಶಾಲಾ ಹಂತದಲ್ಲಿ ಕಾಯ್ದಿರಿಸಬೇಕು).

**14. ಪ್ರಶ್ನೆ:**–ಒಂದು ಬಾರಿ Login ಆದ ಮೇಲೆ ಒಂದು ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಿದ ನಂತರ ಬೇರೆ ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಲು ಪುನಃ Login ಆಗುವ ಅವಶ್ಯಕತೆಯಿದೆಯೇ?

**ಉತ್ತರ:**–ಇಲ್ಲ, ಒಂದು ಭಾರಿ Login ಆಗಿ ಒಂದು ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಿದ ನಂತರ Submit ಮಾಡುವುದು, ನಂತರ Clear ಮಾಡಿ ಬೇರೆ ವಿದ್ಯಾರ್ಥಿಯ ಮಾಹಿತಿಯನ್ನು ಭರ್ತಿ ಮಾಡಬೇಕು.

**15. ಪ್ರಶ್ನೆ:**– ಯಾವ ಯಾವ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಎಷ್ಟು ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು ?

**ಉತ್ತರ:**–

| **ಸಂಸ್ಥೆಗಳು** | **ಪರೀಕ್ಷಾ ಶುಲ್ಕ** | |
|---|---|---|
| ಸರ್ಕಾರಿ, ಅನುದಾನಿತ ಹಾಗೂ ಸ್ಥಳೀಯ ಸಂಸ್ಥೆಗಳ (Local body schools) ಶಾಲೆಗಳು | ಸಾಮಾನ್ಯ, ಇತರೆ ಹಿಂದುಳಿದ ವರ್ಗದ ಮತ್ತು ವಿಕಲಚೇತನ ವಿದ್ಯಾರ್ಥಿಗಳು | ರೂ.20/– |
| | ಪ.ಜಾ/ಪ.ಪಂ. ವಿದ್ಯಾರ್ಥಿಗಳು | ರೂ.10/– |